


# ವಠಾರವೆಂಬ ಸ್ನೇಹದ ಬಳ್ಳಿಯೂ ಮಾಮಿಯೆಂಬ ಕಳ್ಳಿಯೂ

**ಆರತಿ ಘಟಿಕಾರ್**

ಕಲೆ: ಪ್ರವೀಣ್ ಆಚಾರ್ಯ

ವರ್ಷಾನುಗಟ್ಟಲೆ ಇಟ್ಟರೂ ಹಳಸದೆ, ರುಚಿಯಾದ ಘಮಘಮಿಸುವ ರಸಗವಳದ ಮೆಲುಕು ಕೊಡುವ ಶಕ್ತಿ ಬಾಲ್ಯದ ನೆನಪುಗಳಿಗೆ ಮಾತ್ರ ಇದೆ ಎನ್ನಬಹುದು. ಇನ್ನು ಆಗಿನ ಅನುಭವಗಳು ಹೊಳೆಯುವ ಮುತ್ತುಗಳಂತಿರದಿದ್ದರೂ ಮರಳ ದಂಡೆಯ ಕಪ್ಪೆ ಚಿಪ್ಪುಗಳಾದರೂ ಸರಿ, ಇಂಥ ಸರಕುಗಳಿಂದಲೆ ಕಾಗದದ ದೋಣಿಯಲ್ಲಿ ಮುದ ನೀಡುವ ಪಯಣ ನಮ್ಮದಾಗಬಹುದು.

“ಪಟ್ಟ ಪಾಡೆಲ್ಲವೂ ಹುಟ್ಟು ಹಾಡಾಗುತ” ಎಂದು ಕವಿ ದ.ರಾ. ಬೇಂದ್ರೆಯವರು ಹಾಡಿದಂತೆ ಆಗಿನ ಕಾಲದ ಕಷ್ಟ ಕೋಟಲೆಗಳು, ಈಗ ನೆನೆಸಿಕೊಂಡರೆ ಕೀಟಲೆ ಮಾಡುತ್ತಾ ರಂಜಿಸುವುದೆ ಹೆಚ್ಚು!

ನನ್ನ ಬಾಲ್ಯಕಾಂಡ ವಠಾರದಲ್ಲೆ ಆರಂಭವಾಗಿದ್ದು. ಮನೆ ಮಾಲೀಕರ ಕೃಪಾ ಕಟಾಕ್ಷದಿಂದ ನನ್ನ ಲಗ್ನವಾಗುವವರೆಗೂ ಅಲ್ಲೇ ಬಿಡಾರ ಹೂಡಿದ್ದೆವು. ಹಾಗಂತ ಇದು ‘ಗಣೇಶನ ಮದುವೆ’ ಸಿನಿಮಾದಂತೆ ಸಾಲಾಗಿ ಎಂಟೋ ಹತ್ತೋ ಮನೆಗಳಿರುವ ವಠಾರವಲ್ಲದೆ, ಒಂದು ರೀತಿ ಮಾಡರ್ನ್ ವಠಾರವಾಗಿತ್ತು! ಮೊದಲಿಗೆ ಉದ್ದನೆಯ ಕ್ರಿಕೆಟ್ ಪಿಚ್ಚು ಹೋಲುವಂತಹ ಕಲ್ಲಿನ ಅಂಗಳದಲ್ಲಿ ಬಲಕ್ಕೆ ತಿರುಗಿದರೆ ಆಗಿನ